KAN 203.4

ಕ್ರೆಡಿಟ್ ಆಧಾರಿತ ಎರಡನೇ ಸೆಮಿಸ್ಟರ್ ಬಿ.ಬಿ.ಎಂ./ಬಿ.ಸಿ.ಎ ಪದವಿ ಪರೀಕ್ಷೆ – ಏಪ್ರಿಲ್ 2016

ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ

ಅಂಕಗಳು: 80

I (ಅ) ಒಂದು ಪದ್ಯದ ಭಾವಾರ್ಥ, ಸ್ವಾರಸ್ಯವನ್ನು ವಿವರಿಸಿ. 5X1=05

(1) ನರ ಮೃಗಧಾಮ ನಿಮ್ಮ ಭಾರತ
ವರುಷ ಭೂಮಿಯೊಳೊಂದು ವರುಷಾಂ
ತರ ನಪುಂಸಕನಾಗಿ ಚರಿಸು ನಿರಂತರಾಯದಲಿ
ಹರಿಯ ಮೊರೆಯೊಗು ಹರನ ನೀನನು
ಸರಿಸು ನಿಮ್ಮಯ್ಯಂಗೆ ಹೇಳಿದು
ನಿರುತ ತಪ್ಪದು ಹೋಗೆನುತ ಮೊಗದಿರುಹಿದಳು ಚಪಲೆ

(2) ಹಿರಿದು ಕರ್ಮವ ಮಾಡಿ ಹರಿವ ನೀರೊಳು ಮುಳುಗೆ
ಕರಗುವದೆ ಪಾಪ ತಾ ಮುನ್ನ ಮಾಡಿದ್ದು
ಎರೆಯ ಕಲ್ಲೆಂಟೆ ಸರ್ವಜ್ಞ

ಆ) ಎರಡರ ಸಂದರ್ಭ, ಸ್ವಾರಸ್ಯ ವಿವರಿಸಿ 3X2=06

(1) ನುಡಿಗೆ ಬೆರಗಾದಳು ಮನೋಜನ ಸಡಗರಕ್ಕೆ ತೆಕ್ಕಿದಳು

(2) ಸೀಗೆಯ ಮೆಳೆಯಲ್ಲಿ ಮಲಗವನೆ

(3) ಶ್ವಾನ ತೆಂಗಿನಕಾಯಿಯ ತಾನು ಮೆಲಬಲ್ಲುದೆ?

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ನೀಡಿರಿ 10X1=10

(1) ಕುಮಾರ ವ್ಯಾಸನ 'ಊರ್ವಶಿಯ ಶಾಪ' ಕಾವ್ಯಭಾಗದ ಅರ್ಜುನ ಊರ್ವಶಿಯರ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

(2) ಸರ್ವಜ್ಞನ ವಚನಗಳಲ್ಲಿ ವ್ಯಕ್ತವಾದ ವೈವಿಧ್ಯಮಯ ವಿಚಾರಗಳನ್ನು ಕುರಿತು ವಿವೇಚಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7X1=07

(1) ಜನಪದರ ಬದುಕಿನ ಚಿತ್ರಣವನ್ನು 'ನಾಗವ್ವ' ಕಥನಗೀತೆ ಹೇಗೆ ಚಿತ್ರಿಸಿದೆ?

(2) ಅಸಹಾಯಕತೆ ಮತ್ತು ಸಾವಿನ ಸ್ವರೂಪವನ್ನು ಕುರಿತ ವಿಸ್ಮಯವನ್ನು 'ಗಿಳಿಯು ಪಂಜರದೊಳಿಲ್ಲ' ಕೀರ್ತನೆ ಹೇಗೆ ವ್ಯಕ್ತಪಡಿಸುತ್ತದೆ?

II ಅ) ಯಾವುದಾದರೂ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 10X1=10

(1) ಸೀನಪ್ಪನನ್ನು ಲೇಖಕರು 'ಅವಾಂತರದ ಸೀನಪ್ಪ' ಎಂದು ಕರೆಯಲು ಕಾರಣಗಳೇನು?

(2) ಪ್ರಕೃತಿಯ ಸಂಕೀರ್ಣ ವಿದ್ಯಮಾನಗಳು 'ಕುಕ್ಕುಟ ಪಿಶಾಚ' ಪ್ರಬಂಧದಲ್ಲಿ ಹೇಗೆ ಮೂಡಿಬಂದಿದೆ?

ಆ) ಯಾವುದಾದರೂ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7X1=07

(1) 'ಪ್ಯಾರಾನಿಗೆ ಸೈತಾನ್ ಕಾಟ' ಪ್ರಬಂಧದ ಸ್ವಾರಸ್ಯ ವಿವರಿಸಿ.

(2) ಕದ ತಟ್ಟುತ್ತಿದ್ದ ದೆವ್ವವನ್ನು ಕಂಡು ಹಿಡಿಯಲು ಲೇಖಕರು ಕೈಗೊಂಡ ಕ್ರಮಗಳೇನು?

III ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ

(1) 'ಧರ್ಮ ಮತ್ತು ಗುಣ ಹುಟ್ಟಿನಿಂದ ಬರುವುದಿಲ್ಲ' ಈ ಮಾತನ್ನು 'ಕಪಿಲ' ನಾ
ವಿವರಿಸಿ.

(2) ಪ್ರಾಚೀನ ಭಾರತದ ಶಿಕ್ಷಣ ವ್ಯವಸ್ಥೆಯ ಮೇಲೆ 'ಕಪಿಲ' ನಾಟಕ ಹೇಗೆ ಬೆಳಕು

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ

(1) ರಾಮಭಟ್ಟನ ವ್ಯಕ್ತಿತ್ವವನ್ನು ಪರಿಚಯಿಸಿ.

(2) ಅರುಂಧತಿ ಮಾತು ಕಪಿಲ ಪ್ರೀತಿಯ ಸನ್ನಿವೇಶ 'ಕಪಿಲ' ನಾಟಕವನ್ನು ಹೇಗೆ

ಇ) ಎರಡರ ಸಂದರ್ಭ, ಸ್ವಾರಸ್ಯ ವಿವರಿಸಿರಿ

(1) 'ಊಟಕ್ಕೆ ಎಲೆ ಬೇಕಾಗಿತ್ತು, ಬಳಸಿದಿರಿ.'

(2) 'ಗಂಡಸಿಗೆ ಅಶುದ್ಧಿ ಎಂಬುದೇ ಇಲ್ಲ.'

(3) 'ಮನುಷ್ಯ ಹುಟ್ಟಿ ಕೂಡಿ ಬಾಳುವುದಕ್ಕೆ ಅನುಕೂಲವಾಗಲಿ ಅಂತ ಧರ್ಮವನ

IV ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.

(1) ಬಿ. ಎಂ. ಶ್ರೀ

(2) ಸರ್ವಜ್ಞ

(3) ಪುರಂದರದಾಸ

ಆ) ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ

(1) ಕುಮಾರವ್ಯಾಸ ತನ್ನ ಕಾವ್ಯಕ್ಕೆ ಇಟ್ಟ ಹೆಸರು ಯಾವುದು?

(2) ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ಬಳಸುವ ಅಂಕಿತ ಯಾವುದು?

(3) ಯಾವುದು ನಿಜವಾದ ವೇದ ಎಂದು ಕವಿ ಸರ್ವಜ್ಞನ ಅಭಿಮತ?

(4) ಬಿ.ಎಂ. ಶ್ರೀಕಂಠಯ್ಯ ಅವರ ಕಾವ್ಯನಾಮ ಯಾವುದು?

(5) 'ಸಂತೆ' ಕವನವನ್ನು ಯಾವ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ?

(6) ಡಾ. ಸಿದ್ಧಲಿಂಗಯ್ಯ ಅವರ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ

*****

KAN 202.4 Reg. No. ..................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಬಿ.ಎಂ/ಬಿ.ಸಿ.ಎ. ಪದವಿ ಪರೀಕ್ಷೆ

ಏಪ್ರಿಲ್ 2014

ಕನ್ನಡ ಭಾಷಾ ಪತ್ರಿಕೆ – II

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಪದ್ಯಭಾಗಗಳಲ್ಲಿ ಒಂದರ ಸಂದರ್ಭ, ಭಾವಾರ್ಥ ವಿವರಿಸಿ: 05

1) ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ, ನಿ
ನ್ನಾದಿಯೊಳಬ್ಬೆ ಕೊಂತಿ, ನಿನಗಮ್ಮನಹರ್ಪತಿ, ಪಾಂಡುನಂದನರ್
ಸೋದರರಯ್ವೆ ಮಯ್ದುನನೆನಾಂ, ಪೆಱತೇಂ ಪಡೆಮಾಡೊ, ನಿನ್ನದೀ
ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ॥

2) ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲಹೊಯ್ದು ಕಿಡಿಯ ತೆಗೆದುಕೊಂಬಂತೆ!
ಬಲ್ಲವರೊಡನೆ ಸಂಗವ ಮಾಡಿದರೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸಂಗ
ಕರ್ಪೂರಗಿರಿಯ ಉರಿಯಕೊಂಡಂತೆ॥

ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ. 06

1) ಹೊಸನೆತ್ತರುಕ್ಕಿಕ್ಕಿ ಆರಿಹೋಗುವ ಮುನ್ನ
2) ನೀನಿಲ್ಲದ ಮನೆಮನೆಯಲಿ ಏನಿದ್ದೂ ವ್ಯರ್ಥ
3) ಹೆಣ್ಣೂ ಅಲ್ಲ–ಗಂಡೂ ಅಲ್ಲದ ಆತ್ಮಗಳನ್ನು ಹುಟ್ಟಿಸುತ್ತಿರುವವರಾರು?

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) ಕರ್ಣನ ಮನವೊಲಿಸಲು ಕೃಷ್ಣನು ಮಾಡಿದ ಭೇದೋಪಾಯವು ಪಂಪನ ಕಾವ್ಯಭಾಗದಲ್ಲಿ ಹೇಗೆ ವ್ಯಕ್ತಗೊಂಡಿದೆ? ವಿವರಿಸಿ.
2) ಕಟ್ಟುವೆವು ನಾವು ಕವನದ ಆಶಯವೇನು? ವಿವರಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: 07

1) ಮಾಯೆಯ ಬಗ್ಗೆ ಅಕ್ಕಮಹಾದೇವಿ ಏನೆನ್ನುತ್ತಾಳೆ?
2) 'ಮಾತಾಡಬೇಕು' ಎಂದು ಕವಿ ಹೇಳಲು ಕಾರಣವೇನು?

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ: 10

1) ಎಮ್ಮೆಗಿರಬಹುದಾದ ಅರಿವಿನ ಸೂಕ್ಷ್ಮತೆ 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ' ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿದೆ?
2) ಪ್ಯಾರಾನಿಗೆ ಓತಿಕ್ಯಾತವೊಂದು ಸೈತಾನ್ ಆಗಿ ಕಾಡಿದ ಪ್ರಸಂಗವನ್ನು ತೇಜಸ್ವಿ ಅವರು ಚಿತ್ರಿಸಿರುವ ಬಗೆಯನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: 07

1) ನೇಮಿಚಂದ್ರ ಅವರ ದೃಷ್ಟಿಯಲ್ಲಿ ಉಡುಗೊರೆ ಹೇಗಿರಬೇಕು?

2) 'ಮಸಾಲೆದೋಸೆ' ಪ್ರಬಂಧದಲ್ಲಿನ ಸಂಸ್ಕೃತಿ ಚಿಂತನೆಯನ್ನು ವಿವರಿಸಿ.

III. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ: 6

1) ಪ್ರಬಂಧ ರಚನೆ ಎಂದರೇನು? ಅದರ ಲಕ್ಷಣ ಸ್ವರೂಪಗಳೇನು?

2) ಭಾಷಾಂತರ ಎಂದರೇನು? ಭಾಷಾಂತರಕಾರನ ಅರ್ಹತೆಗಳೇನು? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: 03

1) ಪ್ರಬಂಧದ ಪ್ರಕಾರಗಳಾವುವು?

2) ಭಾಷಾಂತರಕಾರನ ಸಾಮಾಗ್ರಿಗಳು ಯಾವುವು?

IV. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) 'ಕಪಿಲ' ನಾಟಕವು ತಾರತಮ್ಯವಿಲ್ಲದ ಸಮಾಜ ನಿರ್ಮಾಣದ ಆಶಯವನ್ನು ಹೇಗೆ ಪ್ರತಿಪಾದಿಸುತ್ತದೆ ವಿವರಿಸಿ.

2) ಕಪಿಲನ ಬದುಕಿನ ಅನನ್ಯತೆಯೇನು? ನಾಟಕದ ಹಿನ್ನೆಲೆಯಲ್ಲಿ ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ: 05

1) ಲಚ್ಚಿಯ ದುರಂತ ಬದುಕಿಗೆ ಕಾರಣವೇನು?

2) ನಾರಾಯಣಭಟ್ಟ ಅಥವಾ ಯಜ್ಞದತ್ತನ ಪಾತ್ರವನ್ನು ಪರಿಚಯಿಸಿ.

V. ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ. 06

1) ಪಂಪ

2) ಸಂತ ಶಿಶುನಾಳ ಷರೀಫ

3) ಸಿದ್ಧಲಿಂಗಯ್ಯ

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: 05

1) ಅಕ್ಕಮಹಾದೇವಿಯ ಅಂಕಿತನಾಮ ಯಾವುದು?

2) ಮೈಸೂರು ಮಲ್ಲಿಗೆ ಯಾರ ಕವನ ಸಂಕಲನ?

3) 'ನಮ್ಮ ಊರಿನ ರಸಿಕರು'' ಕೃತಿಯ ಕರ್ತೃ ಯಾರು?

4) ಪು.ತಿ.ನ ರ ಪೂರ್ಣ ಹೆಸರೇನು?

5) ಕಪಿಲನ ತಾಯಿ ಯಾರು?

**********

KAN 202.4 Reg. No. ...................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಬಿ.ಎಂ/ಬಿ.ಸಿ.ಎ. ಪದವಿ ಪರೀಕ್ಷೆ

ಏಪ್ರಿಲ್ 2013

ಕನ್ನಡ ಭಾಷಾ ಪತ್ರಿಕೆ - II

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯ ಭಾಗದ ಸಂದರ್ಭ ಸೂಚಿಸಿ, ಅದರ ಭಾವಾರ್ಥವನ್ನು ವಿವರಿಸಿ. 05

1) ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ, ನಿ
ನ್ನದಿಯೊಳಬ್ಬೆಕೊಂತಿ, ನಿನಗಮ್ಮನಹರ್ಪತಿ, ಪಾಂಡುನಂದನರ
ಸೋದರರೆಯ್ದೆಮಯ್ದುನ ನೆನಾಂ, ಪೆಱತೇಂ ಪಡೆಮತೊ, ನಿನ್ನದೀ
ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ

2) ಆ ದೇವರು, ಈ ದೇವರು
ಉಳಿದರೆ ಈಗಿಲ್ಲಿ?
ಇಂದೆಲ್ಲರು ಕೈಮುಗಿವರು
ನಿನಗೊಬ್ಬಳಿಗಿಲ್ಲಿ

ಆ) ಎರಡು ಸಾಲುಗಳ ಸಂದರ್ಭ, ಸ್ವಾರಸ್ಯ ವಿವರಿಸಿ. 06

1) ಕರ್ಪೂರಗಿರಿಯ ಬರಿಯಕೊಂಡಂತ
2) ಸೋರುತಿಹುದು ಮನೆಯ ಮಾಳಿಗಿ
3) ನೀನಿಲ್ಲದ ಮನೆಮನೆಯಲಿ ಏನಿದ್ದೂ ವ್ಯರ್ಥ

ಇ) ಕೆಳಗಿನ ಒಂದು ಪ್ರಶ್ನೆಗೆ ವಿಶ್ಲೇಷಣಾತ್ಮಕವಾಗಿ ಉತ್ತರಿಸಿರಿ. 10

1) ಕರ್ಣನ ಸ್ವಾಮಿನಿಷ್ಠೆ, ಮಾತೃಭಕ್ತಿ, ಮತ್ತು ತ್ಯಾಗ ಮನೋಭಾವಗಳು 'ಪಿಡಿಯೆಂ ಪುರಿಗಣೆಯಂ' ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿವೆ? ವಿವರಿಸಿ.

2) ನವಸಮಾಜ ನಿರ್ಮಾಣದ ಆಶಯ 'ಕಟ್ಟುವೆವು ನಾವು' ಕವನದಲ್ಲಿ ವ್ಯಕ್ತವಾದ ಬಗೆ ಹೇಗೆ? ವಿವರಿಸಿರಿ.

ಈ) ಕೆಳಗಿನ ಒಂದು ಪ್ರಶ್ನೆಗೆ ಉತ್ತರಿಸಿರಿ. 07

1) 'ಸೋರುತಿಹುದು ಮನೆಯ ಮಾಳಿಗಿ' ತತ್ವಸಾರುವ ಸಂದೇಶವೇನು?

2) ಅಕ್ಕಮಹಾದೇವಿಯ ವಚನಗಳಲ್ಲಿ ಅಡಗಿರುವ ಲೋಕನೀತಿಯನ್ನು ವಿಶದಪಡಿಸಿ.

II. ಅ). ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ. 10

1) 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?' – ಪ್ರಬಂಧದ ಸ್ವಾರಸ್ಯವೇನು? ವಿವರಿಸಿರಿ.
2) 'ಮಸಾಲೆದೋಸೆ' – ಪ್ರಬಂಧದಲ್ಲಿ ವ್ಯಕ್ತಗೊಂಡಿರುವ ಸಂಸ್ಕೃತಿ ಚಿಂತನೆಯನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 07

1) 'ಉಡುಗೊರೆ'ಯ ಬಗ್ಗೆ ಲೇಖಕಿಯ ಅಭಿಪ್ರಾಯವೇನು?
2) ಎಮ್ಮೆಯ ಸೃಷ್ಟಿಯ ಕುರಿತಾದ ಪೌರಾಣಿಕ ಕಥೆಯೇನು?

III. ಅ) ಕೆಳಗಿನ ಒಂದು ಪ್ರಶ್ನೆಗೆ ಉತ್ತರಿಸಿರಿ.

1) ಪ್ರಬಂಧ ರಚನೆ ಎಂದರೇನು? ಅದರ ಲಕ್ಷಣ ಮತ್ತು ಪ್ರಕಾರಗಳನ್ನು ವಿವರಿಸಿರಿ.

2) ಭಾಷಾಂತರ ಎಂದರೇನು? ಭಾಷಾಂತರಕಾರನಿಗಿರಬೇಕಾದ ಅರ್ಹತೆಗಳೇನು?

ಆ) ಒಂದನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.

1) ಪ್ರಬಂಧದ ಸ್ವರೂಪ

2) ಭಾಷಾಂತರ ಏಕೆ?

IV. ಅ) ಕೆಳಗಿನ ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ.

1) ತೆರೆಗಳು ನಾಟಕದಲ್ಲಿ ವ್ಯಕ್ತಿಯ ಭಾವಕೋಶ ಬಯಲುಗೊಂಡ ಬಗೆ ಹೇಗೆ? ವಿವರಿಸಿರಿ.

2) ಮನುಷ್ಯನ ಅಸ್ತಿತ್ವದ ಅಸಂಗಗತೆಯ 'ತೆರೆಗಳು' ನಾಟಕ ಬಿಂಬಿಸಿದ ಬಗೆ ಹೇಗೆ? ವಿವರಿಸಿರಿ.

ಆ) ಕೆಳಗಿನ ಒಂದು ಪ್ರಶ್ನೆಗೆ ಉತ್ತರಿಸಿರಿ.

1) ತೆರೆಗಳು ನಾಟಕದ ಆಶಯವೇನು?

2) ವ್ಯಕ್ತಿ ಅಥವಾ ಕಂಠಿಯ ಪಾತ್ರವನ್ನು ಪರಿಚಯಿಸಿ.

V. ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿರಿ.

1) ಅಕ್ಕಮಹಾದೇವಿ

2) ಕೆ.ಎಸ್. ನರಸಿಂಹಸ್ವಾಮಿ

3) ಗೋಪಾಲಕೃಷ್ಣ ಅಡಿಗ

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1) ಕರ್ಣನ ತಂದೆ ಯಾರು?

2) 'ಚೆನ್ನ ಮಲ್ಲಿಕಾರ್ಜುನ' ಯಾರ ಅಂಕಿತನಾಮ?

3) 'ಅಮೇರಿಕಾದಲ್ಲಿ ಗೊರೂರು' ಯಾರ ಕೃತಿ?

4) 'ಮಸಾಲೆದೋಸೆ' ಯಾರು ಬರೆದ ಪ್ರಬಂಧ?

5) ಲಂಕೇಶರು ನಡೆಸುತ್ತಿದ್ದ ವಾರ ಪತ್ರಿಕೆ ಯಾವುದು?

**********************

KAN 202.4 Reg. No. ....................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಬಿ.ಎಂ/ಬಿ.ಸಿ.ಎ. ಪದವಿ ಪರೀಕ್ಷೆ ಏಪ್ರಿಲ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಕೆಳಗಿನ ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಅದರ ಸ್ವಾರಸ್ಯವನ್ನು ವಿವೇಚಿಸಿರಿ. 1x5=5

1) ಅನಿರೆ ನೀಮಿದೇಕೆ ದಯೆಗೆಯ್ದಿರೊ ವಿಾಂಗುಲಿಗಂಗೆ, ಪೇೞಿಮೆಂ
ದಾ ನರನಾಥನಂ ತಿಳಿಪೆ, ತನ್ಮನಿ ಭೂಭುಜನೆಯ್ದೆ ನಂಬಿ ಕಾ
ನೀನ ಸಮಯ ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು, ತಾ
ನೀ ನಯದಿಂದೆ ಪೆರ್ಚಿ ಪೊರೆದಟ್ಟುಟಿಳೊಳಂದೊಡನುಂಡನಲ್ಲನೇ

ಅಥವಾ

2) ಕಟ್ಟುವೆವು ನಾವು ಹೊಸ ನಾಡೊಂದನು – ರಸದ ಬೀಡೊಂದನು
ಹೊಸ ನೆತ್ತರುಕ್ಕಿಕ್ಕಿ ಆರಿ ಹೋಗುವ ಮುನ್ನ ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ
ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು

ಆ) ಕೆಳಗಿನ ಎರಡು ಸಾಲುಗಳ ಸಂದರ್ಭ ಸಹಿತ ವಿವರಣೆ ನೀಡಿರಿ. 2×3=6

1) ಭೇದಿಸಲೆಂದೆ ದಲ್ ನುಡಿದರೆನ್ನದಿರ್
2) ನೀನಿಲ್ಲದ ಮನೆಮನೆಯಲಿ ಏನಿದ್ದೂ ವ್ಯರ್ಥ
3) ಹೆಣ್ಣೂ ಅಲ್ಲ – ಗಂಡೂ ಅಲ್ಲದ ಆತ್ಮಗಳನ್ನು ಹುಟ್ಟಿಸುತ್ತಿರುವವರಾರು?

ಇ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ. 1x10=10

1) ಕೃಷ್ಣ ಮತ್ತು ಕುಂತಿ – ಈರ್ವರು ಪ್ರಯತ್ನಪಟ್ಟರೂ ದಾನಶೂರ ಕರ್ಣ ತನ್ನ ನಿಷ್ಠೆ ಬದಲಿಸದೆ ಕೌರವನ ಸ್ನೇಹಕ್ಕೆ ಋಣಿಯಾದದ್ದು ಹೇಗೆ? ವಿವರಿಸಿರಿ.
2) 'ಅಕ್ಕಮಹಾದೇವಿಯ ವಚನಗಳಲ್ಲಿ ಲೋಕನೀತಿ ಅಡಗಿದ್ದು ಅನನ್ಯವಾದ ಶರಣಾಗತಭಾವನೆ ಮಡುಗಟ್ಟಿದೆ' – ಈ ಮಾತಿನ ಹಿನ್ನೆಲೆಯಲ್ಲಿ ಅಕ್ಕನ ವಚನಗಳನ್ನು ವಿಶ್ಲೇಷಿಸಿರಿ.

ಈ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. 1x7=7

1) ಹೊಸ ಸಮಾಜ ನಿರ್ಮಾಣವಾಗಬೇಕೆನ್ನುವ ಕವಿಯ ಆಶಯ 'ಕಟ್ಟುವೆವು ನಾವು' ಕವನದಲ್ಲಿ ಹೇಗೆ ಬಿಂಬಿತವಾಗಿದೆ?
2) ಎಲ್ಲ ದೇವರಿಗಿಂತ ಅನ್ನದೇವರೇ ಮುಖ್ಯ ಎನ್ನುವುದನ್ನು 'ಅನ್ನಪೂರ್ಣೆಗೆ' ಕವನ ಹೇಗೆ ಅನಾವರಣಗೊಳಿಸುತ್ತದೆ?

II. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 1x10=10

1) ಪ್ರಾಣಿಗೂ ಇರಬಹುದಾದ ಅರಿವಿನ ಸೂಕ್ಷ್ಮತೆಯು 'ನಮ್ಮ ಎಮ್ಮೆಗೂ ಮಾತು ತಿಳಿಯುವುದೇ' ಪ್ರಬಂಧದಲ್ಲಿ ಹೇಗೆ ಚಿತ್ರಿತಗೊಂಡಿದೆ?
2) 'ಮಸಾಲೆದೋಸೆ' – ಪ್ರಬಂಧದ ಆಶಯವೇನು? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1x7=7

1) ಉಡುಗೊರೆಯು ಪ್ರದರ್ಶನದ, ಪ್ರತಿಷ್ಠೆಯ ಪ್ರತೀಕವಾಗಬಾರದೆನ್ನುವ ಆಶಯ 'ಆತಕೊಟ್ಟ ವಸ್ತು ಒಡವೆ...' ಪ್ರಬಂಧದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ?
2) 'ಪಾಕಶಾಲೆ' – ಜನಾಂಗವನ್ನು ಒಗ್ಗೂಡಿಸುವ ವಿಂಗಡಿಸುವ ಕೇಂದ್ರ ಹೇಗೆ? ವಿವರಿಸಿರಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. 1x10=10

1) ಲಂಕೇಶರ ತೆರೆಗಳು ನಾಟಕದ ಆಶಯವೇನು? ವಿವರಿಸಿರಿ.

2) "ತೆರೆಗಳು ನಾಟಕ, ಭಾಷೆಯ ಮೇಲೆ ಪಾತ್ರಗಳ ಸಂಬಂಧವನ್ನು ಕಟ್ಟುತ್ತಾ ಹೋಗುತ್ತದೆ". – ಈ ಹೇಳಿಕೆಯನ್ನು ವಿಶ್ಲೇಷಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. 1x5=5

1) ಕಂಠಿಯ ಪಾತ್ರವನ್ನು ಪರಿಚಯಿಸಿರಿ.

2) ಕಿಟ್ಟಿಯ ಪಾತ್ರವನ್ನು ಪರಿಚಯಿಸಿರಿ.

IV. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ. 1x6=6

1) ಪ್ರಬಂಧ ಎಂದರೇನು? ಪ್ರಬಂಧದ ಲಕ್ಷಣ ಮತ್ತು ಪ್ರಕಾರಗಳನ್ನು ವಿವರಿಸಿ.

2) ಭಾಷಾಂತರ ಎಂದರೇನು? ಭಾಷಾಂತರಕಾರನಿಗೆ ಇರಬೇಕಾದ ಅರ್ಹತೆಗಳೇನು?

ಆ) ಕೆಳಗಿನವುಗಳಲ್ಲಿ ಒಂದನ್ನು ಉತ್ತರಿಸಿರಿ. 1x3=3

1) ಭಾಷಾಂತರ ಏಕೆ?

2) ಪ್ರಬಂಧದ ಸ್ವರೂಪವೇನು?

V. ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿರಿ. 2x3=6

1) 'ಸೋರುತಿಹುದು ಮನೆಯ ಮಾಳಿಗಿ'ಯ ಆಶಯ

2) 'ಮಾತಾಡಬೇಕು' ಕವಿತೆಯಲ್ಲಿನ ಕವಿಯ ಅಪೇಕ್ಷೆ

3. ಉಡುಗೊರೆ

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. 1x5=5

1) ರಾಧೇಯ ಯಾರು?

2) ಅಕ್ಕಮಹಾದೇವಿಯ ಅಂಕಿತನಾಮವೇನು?

3) ಪಿ.ಲಂಕೇಶ್ ಸಂಪಾದಕರಾಗಿದ್ದ ಪತ್ರಿಕೆ ಯಾವುದು?

4) 'ಮಸಾಲೆದೋಸೆ' ಯಾರ ಪ್ರಬಂಧ?

5) 'ಆತ್ಮಕೊಟ್ಟ ವಸ್ತು ಒಡವೆ......' ಯಾವ ಪ್ರಸಿದ್ಧ ಕವಿಯ ಕವನದ ಸಾಲು?

******************